ಹಾಕಿ ಅಳತೊಡಗಿದಳು. ಕೂಡಲೆ ತಂತಿಯಿಂದ ವಿದ್ಯುಚ್ಛಕ್ತಿ ಇಳಿದುಹೋಯಿತು. ಆತ ಕಂಬನಿ ಒರೆಸಲು ಹೋದ. ಅದನ್ನಾಕೆ ಬಯಸಿರಬೇಕು; ನಾವಿದ್ದರಿಂದಲೊ ಏನೊ ಕೈ ಹಿಂತಳ್ಳಿದಳು. ಆತ ಶರಣಾಗತನಾಗಿ ಸ್ತೋತ್ರ ಮಾಡಿದನು. ದೇವೀ ಶಾಂತವಾದಳು. ಇಬ್ಬರೂ ತಮ್ಮ ಪ್ರೇಮದ ದಿನಗಳ ಕತೆಯನ್ನು ಹಂಚಿಕೊಳ್ಳುತ್ತ ಗತಕಾಲಕ್ಕೆ ತೇಲಿಹೋದರು. ಅವರು ನೆನಪಿನ ಬುತ್ತಿಬಿಚ್ಚಿ ಹಂಚಿಕೊಂಡ ಬಗೆ ಘನವಾಗಿ ಬದುಕಿದಕ್ಕೆ ಸಾಕ್ಷಿಯಾಗಿತ್ತು. ಭಾಷೆಯ ಕಾರ್ಮೋಡ ಪ್ರೀತಿಯ ಗಾಳಿಗೆ ಹಾರಿಹೋಗಿ ಈಗ ಆಗಸದ ತುಂಬ ಬೆಳದಿಂಗಳು.

ಪ್ರವಾಸದ ಕೊನೆಗೆ, ಯಾವಾಗ ಮನೆ ಮುಟ್ಟಿಯೇನೊ, ಹೆಂಡತಿ ಮಕ್ಕಳ ಮುಖ ನೋಡಿಯೇನೊ, ಜಳಕಮಾಡಿ ಮನೆಯೂಟ ಉಂಡು ಮನೆಯಲ್ಲಿರುವ ನನ್ನ ಪ್ರಿಯವಾದ ಮೂಲೆಯಲ್ಲಿ ಕಾಲುಚಾಚಿ ಕೂರುವೆನೊ ಎಂದು ಮನ ತವಿಸುತ್ತದೆ. ಮನೆ ಮುಟ್ಟುವಾಗ ದೇಹ ಬಸವಳಿರುತ್ತದೆ. ಬಟ್ಟೆ ಮಾಸಿರುತ್ತದೆ. ತಲೆಕೆದರಿರುತ್ತದೆ. ಆದರೆ ಜೋಳಿಗೆ ಕಾಳಿನಿಂದ ತುಂಬಿರುತ್ತದೆ. ಕಾಳು ಭಾವಕೋಶದ ಹೊಲದಲ್ಲಿ ಮೊಳಕೆಯೊಡೆದು ಗಿಡವಾಗುತ್ತದೆ. ಆ ಗಿಡ ಹೂಹಣ್ಣು ತಳೆದಾಗ, ಕೈಕಾಲು ಗಟ್ಟಿಯಿರುವ ತನಕ ದೇಶದ ಈ ತುದಿಯಿಂದ ಆ ತುದಿಗೆ ತಿರುಗಬೇಕು; ಭೂಗೋಳದ ತುಂಬ ಅಲೆಯಬೇಕು ಎಂದು ಠರಾವು ಮಂಡಿಸುತ್ತದೆ.

ಆದರೆ ಹುಟ್ಟಿದೂರಿನತ್ತ ಮಾಡುವ ಪಯಣ ವಿಚಿತ್ರಭಾವ ಸ್ಫುರಿಸುತ್ತದೆ. ಅಲ್ಲಿನ ತೋಪು, ಗುಡ್ಡ, ಕೆರೆ ಬಾಲ್ಯದ ಸ್ಮೃತಿಗಳನ್ನು ಬಡಿದೆಬ್ಬಿಸುತ್ತವೆ; ಜತೆಗೆ ಅಗೋಚರ ವೇದನೆಯ ತಾರನ್ನೂ ಮೀಟುತ್ತವೆ. ಒಲ್ಲೆನೆಂದರೂ ಕರೆವ ಹಾದಿಯ ಪಯಣವೇ ಅದು? ವಾಹನವಿಲ್ಲ, ಚಾಲಕರಿಲ್ಲ. ಸೀಟಿಗಾಗಿ ಹೋರಾಡುವವರೂ, ಸೀಟು ಬಿಟ್ಟುಕೊಟ್ಟು ಉದಾರತೆ ತೋರುವವರೂ ಇಲ್ಲ. ಜಗಳ ಪ್ರೀತಿಯಿಲ್ಲ; ತಿಂಡಿಕಾಫಿ ಹಂಚಿಕೊಳ್ಳುವವರಿಲ್ಲ. ಸೂರ್ಯಚಂದ್ರರ ಚೇಷ್ಟೆಗಳಿಲ್ಲ. ಹೇಗಿರುತ್ತದೋ ಆ ಅಜ್ಞಾತ ಹಾದಿಯ ಪಯಣ? ಹೇಗಾದರೂ ಇರಲಿ, ನನಗಂತೂ ಅವಸರವಿಲ್ಲ. ಯಾರಾದರೂ ಎದ್ದೆಯಾ ಎಂದು ಕೇಳಿದರೆ ಕಂಬಳಿ ಸಿದ್ಧವಾಗಿಲ್ಲ ಎಂದೇ ಉತ್ತರಿಸುವೆ. ಕಾಲನನ್ನು ವಂಚಿಸಿ ಸಾವನ್ನು ಮುಂದೂಡಿದ ಸಿಸಿಫಸ್ ನನ್ನಾದರ್ಶ. ಗೆಳೆಯನ ಕಾಲಜ್ಞಾನ ನಿಜವಾಗಿ, ಹರಣ ಕಸಿವ ಕೊನೆಯ ನಿಲ್ದಾಣ ಬರುವುದಾದರೆ ಅಡ್ಡಿಯಿಲ್ಲ. ಆದರೆ ಅದು ಸಾವಕಾಶವಾಗಿ ಬರಲಿ. ಆಮೆನ್!


## ರಹಮತ್ ತರೀಕೆರೆ

ಕನ್ನಡದ ಪ್ರಮುಖ ಲೇಖಕ ರಹಮತ್ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಗಳನ್ನು ಬರೆದಿದ್ದಾರೆ. 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥ ಪಂಥ', 'ಕರ್ನಾಟಕದ ಸೂಫಿಗಳು' 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.